ಮತ್ತು ಕೇರಳಗಳಲ್ಲಿ ಹರಿದು, ಆ ರಾಜ್ಯಗಳ ಹಸಿರುಕ್ರಾಂತಿಗೂ ಕಾರಣವಾಗಿವೆ.

ಪಶ್ಚಿಮ ಘಟ್ಟಗಳ ಉದ್ದಗಲದಲ್ಲಿ ತಲೆ ಎತ್ತಿ ನಿಂತಿರುವ ಗಿರಿ ಶಿಖರಗಳು ಒಂದಕ್ಕಿಂತ ಇನ್ನೊಂದು ಎತ್ತರ. ಅವುಗಳನ್ನು ಎಣಿಸುತ್ತಾ ಹೋದರೆ, ಲೆಕ್ಕಚಾರ ತಪ್ಪಬಹುದು. ಆ ಘಟ್ಟಗಳ ಏರಿಳಿತಗಳು ಸಿನೋಜೋಯಿಕ್ ಪರ್ವ ಕಾಲದ ಬೆಸಾಲ್ಟ್, ಗ್ರಾನೈಟ್, ಖಾಂಡಲೈಟ್, ಲೆಪ್ಟಿನೈಟ್ರ ಚಾರ್ನಕೈಟ್ ಮತ್ತು ಲಾಟರೈಟ್, ಸುಣ್ಣಶಿಲೆಗಳಿಂದ ಕೂಡಿದ ಸಂಕೀರ್ಣ ರಚನೆಗಳಾಗಿವೆ. ಗ್ರಾನೈಟ್, ನೀಸ್, ಡೈಕ್ಸ್ ಜೊತೆಗೆ, ಕಬ್ಬಿಣ, ಮ್ಯಾಂಗನೀಸ್, ಕ್ರೋಮೈಟ್ ಮತ್ತು ಮರಳುಶಿಲೆ ಸೇರಿದಂತೆ ಲೋಹ ಅಲೋಹಗಳು, ಬೆಲೆ ಬಾಳುವ ಬೆಳ್ಳಿ, ಸುವರ್ಣ, ವಜ್ರ ಮುಂತಾದ ಮೂಲ ಧಾತುಗಳು, ರೂಬಿ, ಮರಕತ, ಮುಂತಾದ ಅನರ್ಘ್ಯ ರತ್ನಗಳ ಖನಿ ನಮ್ಮ ಸಹ್ಯಾದ್ರಿ ಶ್ರೇಣಿ.

ಪಶ್ಚಿಮ ಘಟ್ಟಗಳಲ್ಲಿ ಹುಟ್ಟುವ ನದಿಗಳು ನಮ್ಮ ರಾಷ್ಟ್ರದ ಶೇ. 40 ಭಾಗಕ್ಕೆ ನೀರುಣಿಸುತ್ತಿವೆ ಎನ್ನುವ ಅಂದಾಜಿದೆ. ಈ ಘಟ್ಟದಲ್ಲಿ ಹುಟ್ಟುವ ಗೋದಾವರಿ, ಮಾಂಡವಿ, ಶರಾವತಿ, ಕೃಷ್ಣಾ, ಘಟಪ್ರಭಾ, ಮಲಪ್ರಭಾ, ಭೀಮ, ತುಂಗಾ, ಭದ್ರಾ, ವರದಾ, ಕಾವೇರಿ ಮತ್ತು ಅದರ ಉಪನದಿಗಳಾದ ಹೇಮಾವತಿ, ಕಬಿನಿ ಮುಂತಾದ ಹತ್ತು ಹಲವಾರು ನದಿಗಳು ದೇಶದ ಜಲನಕ್ಷೆಯ ಶೋಭೆ ಹೆಚ್ಚಿಸಿವೆ.

ರಾಜ್ಯದ ಪಶ್ಚಿಮ ದಿಕ್ಕಿಗೆ ಹರಿಯುವ ಕಾಳಿ, ಬೇಡ್ತಿ, ಅಘನಾಶಿನಿ, ಶರಾವತಿ, ಚಕ್ರಾ, ವಾರಾಹಿ, ನೇತ್ರಾವತಿ ಮುಂತಾದ ನದಿಗಳು ಕೃಷಿ ಚಟುವಟಿಕೆಗಳಿಗೂ ವಿದ್ಯುಚ್ಛಕ್ತಿ ಉತ್ಪಾದನೆಗೂ ಅನುವು ಮಾಡಿಕೊಟ್ಟಿವೆ. ಈ ನದಿಗಳು ಉತ್ಪತ್ತಿ ಮಾಡುವ ಜಲ ಪ್ರಮಾಣವನ್ನು ವೈಜ್ಞಾನಿಕವಾಗಿ ವಿವೇಚಿಸಿ ಪೂರ್ವ ದಿಕ್ಕಿಗೆ ಹರಿಸಿ, ಬಂಜರು ಬಯಲು ಸೀಮೆಯನ್ನು ಹಸಿರು ಜಮಖಾನೆಯಾಗಿ ಪರಿವರ್ತಿಸುವ ಕನಸು ನಮ್ಮ ನಡುವೆ ಚಾಲ್ತಿಯಲ್ಲಿದೆ.

## ನಿಸರ್ಗದ ಮೇಲೆ ಹಲ್ಲೆ

ಬಿಸಿಲು, ಮಳೆ, ಗಾಳಿ ಮತ್ತು ಪರಿಸರ ಒತ್ತಡಗಳಿಂದ ನಿಸರ್ಗದ ಸವೆತ ಉಂಟಾಗುತ್ತದೆ. ಆದರೆ ಈ ಪ್ರಕ್ರಿಯೆ ನಿಧಾನಗತಿಯದು; ಸಾವಿರ, ಲಕ್ಷ ವರ್ಷಗಳ ಅವಧಿಯಲ್ಲಿ ನಡೆಯುವಂತಹದ್ದು.

## ಮಳೆಹನಿಗಳ ಖಜಾನೆ

ಪಶ್ಚಿಮ ಘಟ್ಟಗಳು ಮುಂಗಾರು ಮೋಡಗಳನ್ನು ತಡೆದು ನಾಡಿನಲ್ಲಿ ಮಳೆಗೆ ಕಾರಣವಾಗುತ್ತವೆ. ಜೂನ್ ತಿಂಗಳಿಂದ ಸೆಪ್ಟಂಬರ್‌ವರೆಗೆ 3ರಿಂದ 4 ಸಾವಿರ ಮಿ.ಮೀ. ಮಳೆ ಪಶ್ಚಿಮ ಘಟ್ಟ ಪರಿಸರದಲ್ಲಿ ಬಿದ್ದರೆ, ಆಗುಂಬೆಯಂಥ ಪ್ರದೇಶಗಳಲ್ಲಿ 6 ಸಾವಿರ ಮಿ.ಮೀ.ಗೂ ಹೆಚ್ಚು ಮಳೆ ಬೀಳುತ್ತದೆ. ಘಟ್ಟದ ದಟ್ಟ ಅಡವಿಯಲ್ಲಿ ಮೂರು ತಿಂಗಳು ಸೂರ್ಯ ಮೋಡಗಳಲ್ಲಿ ಬೆಚ್ಚನೆ ಮಲಗಿ ಬಿಡುತ್ತಾನೆ.





**ಜಲದ ಸೆರಗಿಗೆ ಕೈಹಾಕಿದರೆ..?** ಎಷ್ಟೊಂದು ಜಲಪಾತಗಳು, ಎಷ್ಟೊಂದು ನದಿಮೂಲಗಳು, ಮಳೆಗಾಲ ಬಂದರಂತೂ ಹೆಜ್ಜೆಹೆಜ್ಜೆಗೂ ಧುಮ್ಮಿಕ್ಕುವ ನೀರಧಾರೆಗಳು. ಸಹಜಹರಿವಿಗೆ ಒಡ್ಡು ಕಟ್ಟಿ ಮೆರೆದವರೆಲ್ಲ ಮುಂದೆ ಏನಾಗಬಹುದು?



## ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ

ಪಶ್ಚಿಮ ಘಟ್ಟಗಳ ಸಂರಕ್ಷಣೆಯ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ 2014ರಿಂದ ನಾಲ್ಕು ಕರಡು ಅಧಿಸೂಚನೆಗಳನ್ನು ಹೊರಡಿಸಿ, ಘಟ್ಟ ಪ್ರದೇಶದ ರಾಜ್ಯಗಳ ಆಕ್ಷೇಪಗಳನ್ನು ಸಲ್ಲಿಸುವಂತೆ ಕೇಳಿತ್ತು. ಇತ್ತೀಚೆಗಿನ ಅಧಿಸೂಚನೆಯನ್ವಯ ಆಕ್ಷೇಪಣೆಗಳನ್ನು ಸಲ್ಲಿಸಲು ಕೇಂದ್ರಸರ್ಕಾರ ನೀಡಿದ್ದ 18 ತಿಂಗಳ ಅವಧಿ ಮುಗಿದಿದೆ. ಇತ್ತೀಚಿನ ವರದಿಗಳಂತೆ ಕಸ್ತೂರಿ ರಂಗನ್ ನೀಡಿದ ವರದಿಯನ್ನು 'ರಾಷ್ಟ್ರೀಯ ಹಸಿರು ಮಂಡಳಿ' ಕೈಗೆತ್ತಿಕೊಂಡಿದೆ. ಈ ವರದಿಯನ್ನು ಚಾಚೂ ತಪ್ಪದೆ ಅನುಷ್ಠಾನಗೊಳಿಸಲೇಬೇಕು, ತಪ್ಪಿದರೆ ಸಂಬಂಧಪಟ್ಟ ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಶಿಕ್ಷೆ ವಿಧಿಸುವ ಎಚ್ಚರಿಕೆ ನೀಡಲಾಗಿತ್ತು.

ಪಶ್ಚಿಮ ಘಟ್ಟಗಳನ್ನು ಶಾಶ್ವತವಾಗಿ ಉಳಿಸುವ ನಿಟ್ಟಿನಲ್ಲಿ ಕಸ್ತೂರಿ ರಂಗನ್ ವರದಿ ಜಾರಿಗೆ ಬರಲೇಬೇಕು ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಆ ವರದಿ ಜಾರಿಗೆ ಬಂದರೆ ಸರ್ಕಾರದ ಆರ್ಥಿಕ ಸ್ಥಿತಿಗತಿಗಳು ಕುಗ್ಗುವುದಲ್ಲದೆ, ಜನರ ಜೀವನ ಬೀದಿಗೆ ಬೀಳುತ್ತದೆ ಎಂಬುದು ಕರ್ನಾಟಕ ಸರ್ಕಾರದ ಅಳಲು. ಈ ದ್ವಂದ್ವ ನೀತಿಯನ್ನು ಮುಕ್ತವಾಗಿ ಬಗೆಹರಿಸುವ ಉಪಶಮದ ದಾರಿ ಹುಡುಕಲೇಬೇಕಾಗಿದೆ.